ESI.A.No.28/2021

AW-1,

ದಿನಾಂಕಃ 21-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃಶ್ರೀ. ABN ವಕೀಲರಿಂದ

ನಾನು 2009 ರಲ್ಲಿ ಇ ಎಸ್ ಐ ಕೋಡನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿ. ನಾನು ಏಪ್ರಿಲ್ 2012 ರಿಂದ ಜನವರಿ 2015 ರವರಿಗೆ ವಂತಿಗೆಯನ್ನು ನೀಡಿರುವುದಿಲ್ಲ ಎಂದು ಕಾರ್ಪೋರೇಶನ್ನಿನವರು ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ. ನಂತರ ನಾನು ರೂ.3,64,650-00 ಗಳನ್ನು ಕಟ್ಟಬೇಕು ಎಂದು ಆದೇಶವನ್ನು ಕಾರ್ಪೋರೇಶನ್ನವರು ನೀಡಿರುತ್ತಾರೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಇ ಎಸ್ ಐ ಎ.ನಂ.36/2012 ನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ಅರ್ಜಿಯನ್ನು ಭಾಗಶಃ ಪುರಸ್ಕರಿಸಿ ಈ ನ್ಯಾಯಾಧೀಕರಣವು ಇ ಎಸ್ ಐ ಕಾರ್ಪೋರೇಶನ್ನಿಗೆ ರೀ ಅಸೆಸ್ಮೆಂಟ್ ಮಾಡುವಂತೆ ಸೂಚಿಸಿರುತ್ತದೆ ಎಂದರೆ ಸರಿ. ನಂತರ ಎದುರುದಾರರು ನನಗೆ ನೋಟೀಸನ್ನು ನೀಡಿ ಖುದ್ದು ಸುನಾವಣೆಗೆ ಹಾಜರಾಗುವಂತೆ ಸೂಚಿಸಿರುತ್ತಾರೆ ಎಂದರೆ ಸರಿ. ಅದರಂತೆ ನಾನು ಎದುರುದಾರರ ಮುಂದೆ ಖುದ್ದು ಸುನಾವಣೆಗೆ ಹಾಜರಾಗಿರುತ್ತೇನೆ ಎಂದರೆ ಸರಿ. ಆಗ ನಾನು ವ್ಯಾಟ್ ರಿಜಿಸ್ಟ್ರೇಷನ್, ಪಿ ಎಫ್ ವಂತಿಗೆ ಚಲನ್ಸ , ಇಂಕಂ ಟ್ಯಾಕ್ಸ ಮತ್ತು ಕೆನರಾ ಬ್ಯಾಂಕ್ ಪಾಸ್ ಪುಸ್ತಕಗಳನ್ನು ಸಲ್ಲಿಸಿರುತ್ತೇಪನೆ ಎಂದರೆ ಸರಿ. ಆದರೆ ಆ ಕಾಲಕ್ಕೆ ನಾನು ಅಟೆಂಡೆನ್ಸ ರಿಜಿಸ್ಟರ್ , ಪೇಮೆಂಟ್ ರಿಜಿಸ್ಟರ್ , ಲೆಡ್ಜರ್ , ಕ್ಯಾಷ್ ಬುಕ್ , ಬಿಲ್ಸ್ ಮತ್ತು ವೋಚರ್ಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ಮತ್ತೊಂದು ದಿನಾಂಕವನ್ನು ನೀಡುವಂತೆ ಕೇಳಿಕೊಂಡಿರುತ್ತೇನೆ ಎಂದರೆ ಸರಿ. ನಂತರದ ದಿನಗಳಲ್ಲಿ ನಾನು ವೇಜ್ ರಿಜಿಸ್ಟರ್ ಮತ್ತು ಪೇಮೆಂಟ್ ರಿಜಿಸ್ಟರನ್ನು ಹಾಜರುಪಡಿಸಿದಾಗ ಅದರಲ್ಲಿ ಕೇವಲ ಪ್ರೊಪ್ರೇಟರ್ ಸಹಿ ಇದ್ದುದರಿಂದ ಸದರಿ ದಾಖಲಾತಿಗಳನ್ನು ಎದುರುದಾರರು ಒಪ್ಪಿರುವುದಿಲ್ಲ ಎಂದರೆ ಸರಿಯಲ್ಲ. ನಂತರ 5-11-2020 ರಲ್ಲಿ ನಾನು ಎದುರುದಾರರ ಮುಂದೆ ಹಾಜರಾಗಿ ಇ ಎಸ್ ಐ ಇ ನಂ.36/2017 ರಲ್ಲಿ ಗುರುತಿಸಲಾದ ನಿಶಾನೆ ಎ-1 ರಿಂದ 9 ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ದಾಖಲಾತಿಗಳು ಐ ಟಿ ಆರ್ ಗಳಾಗಿದ್ದು ಅವುಗಳಿಗೆ ಪೂರಕವಾದ ದಾಖಲಾತಿಗಳನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 2014-15 ರ ಇಂಕಂ ಟ್ರಾಕ್ಸ್ ಸ್ಟೇಟ್ಮೆಂಟನ್ನು ಮಾತ್ರ ಎದುರುದಾರರ ಮುಂದೆ ಹಾಜರುಪಡಿಸಿದ್ದು ಬೇರೆ ಅವಧಿಗೆ ಸಂಬಂಧಿಸಿದಂತೆ ಸ್ಟೇಟ್ಮೆಂಟ್ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ಸದರಿ ಅವಧಿಯ ಹಿಂದಿನ ಅವಧಿಗೆ ಐ ಟಿ ರಿಟರ್ನನ್ನು ನಾನು ಸಲ್ಲಿಸಿರುವುದಿಲ್ಲ ಎಂದು ನುಡಿಯುತ್ತಾರೆ. 2012-13, 2015-16 ಅವಧಿಯ ಐ ಟಿ ಆರ್ ನ್ನು ನಾನು ಸಲ್ಲಿಸಿರುತ್ತೇನೆ ಆದರೆ ಅದರಲ್ಲಿ ತೋರಿಸಿದ ಆದಾಯ ಯಾವ ಮೂಲದಿಂದ ಬಂದಿರುತ್ತದೆ ಎಂದು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ESI.A.No.28/2021

AW-1,

ನಾನು ಬ್ಯಾಂಕ್ ಪಾಸ್ ಪುಸ್ತಕವನ್ನು ನಾನು 2012 ರಿಂದ 2016 ರವರೆಗೆ ಸಲ್ಲಿಸಿರುತ್ತೇನೆ ಎಂದರೆ ಸರಿ. 2012 ರಿಂದ 2016 ರವರೆಗೆ ನನಗೆ ಅದಾಯ ಇತ್ತು ಎಂಬ ಸೂಚನೆಗೆ ಸಾಕ್ಷಿ ನನ್ನ ಬಳಿ ಒಂದು ಲಾರಿ ಇತ್ತು ಎಂದು ನುಡಿಯುತ್ತಾರೆ. ಸದರಿ ಲಾರಿಯನ್ನು ಬಾಡಿಗೆಗೆ ನೀಡಿ ಆದಾಯ ಪಡೆದುಕೊಳ್ಳುತ್ತಿದ್ದೆನು ಎಂದರೆ ಸರಿ. ಇ ಎಸ್ ಐ ವಂತಿಗೆ ನೀಡಲು ತಪ್ಪಿಸುವ ಉದ್ದೇಶದಿಂದ ನನಗೆ ಸದರಿ ಅವಧಿಗೆ ಯಾವುದೇ ಆದಾಯ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ ನಾನು ಈ ಅರ್ಜಿಯಲ್ಲಿ ಸಲ್ಲಿಸಿದ ದಾಖಲಾತಿಗಳು ಈ ಅರ್ಜಿಗೆ ಅನುಗುಣವಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯುಲ್ಲ. ನಾನು ಎದುರುದಾರರು ಕೇಳಿದ ವಂತಿಗೆಯನ್ನು ನೀಡಲು ಭಾಧ್ಯಸ್ಥನಾಗಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ.ರಾವ್.ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.